ಆಗಿತ್ತು. ಗಡಿಯಾರ ನೋಡಿಕೊಂಡೆ. 'ನಾನೀಗ ಹೊರಡಬೇಕು. ಮೀಟಿಂಗಿಗೆ ತಡ ಆಗುತ್ತೆ' ಎಂದೆ.

'ಅಂದರ ಅವರೆಲ್ಲಾ ಈಗ ಮೀಟಿಂಗಿಗೆ ಬಂದಿರ್ತಾರೇನ್ರಿ ಸರ್?'

ಇವನು ನನ್ನ ಜೊತೆಗೇ ಬಂದು, ಅವರ ಪರಿಚಯ ಮಾಡಿಕೊಡಬೇಕೆಂದು ಎಲ್ಲಿ ಗಂಟುಬೀಳುತ್ತಾನೋ ಎಂದು ಹೆದರಿಕೆಯಾಯಿತು. ಎಚ್ಚತ್ತುಕೊಂಡು ಹೇಳಿದೆ: 'ಏನೋ ಗೊತ್ತಿಲ್ಲ. ಅದೆಲ್ಲಾ ಹೋದ ಮ್ಯಾಲs ಗೊತ್ತಾಗಬೇಕು. ಅವರಿಗೆಲ್ಲಾ ಕೈತುಂಬ ಕೆಲಸ. ಬಂದರ ಬಂದ್ರು, ಬಿಟ್ಟರ ಬಿಟ್ರು.'

'ಮತ್ತ, ನೀವು ಯಾವಾಗ ಸಿನಿಮಾ ಮಾಡತೀರಿ ಸರ್? ನೋಡ್ರಿ ಸರ್, ನೀವು ಮಾಡಲಿಕ್ಕೇ ಬೇಕು. ಏನ್ರಿ ಸರ್, ನೀವು ಯಾರಿಗೆ ಕಡಿಮಿ ಇದ್ದೀರಿ? ಯಾಕ ಮಾಡಬಾರದು ನೀವು?' ಎನ್ನುತ್ತ ದೇಶಪಾಂಡೆ ಹುಸಿಗೋಪದಿಂದ ಮೇಲೇರಿ ಬಂದ.

ನನಗೆ ಏನು ಹೇಳಬೇಕೋ ತಿಳಿಯಲಿಲ್ಲ. ಪುಣ್ಯಕ್ಕೆ ಆ ಹೊತ್ತಿಗೆ ಹತ್ತಿರವೇ ಒಂದು ಖಾಲೀ ಆಟೊ ಬಂತು. ನಿಲ್ಲಿಸಿ ಅವಸರದಿಂದ ನನ್ನ ಮಗಳನ್ನು ಹತ್ತಿಸಿ, ನಾನೂ ಹತ್ತಿ ಕುಳಿತೆ. ಆದರೆ ದೇಶಪಾಂಡೆ ಬಿಡಲಿಲ್ಲ.

'ಹಂಗಾದರ ನಮ್ಮ—ನಿಮ್ಮ ಭೆಟ್ಟಿ ಮತ್ತ ಯಾವಾಗರಿ ಸರ್? ಖಾಲೀ ಇದ್ದರ ಈಗs ನಿಮ್ಮ ಕೂಡ ಬಂದs ಬಿಡತಿದ್ದೆ. ಆದರ ಒಬ್ಬರನ್ನ ಅರ್ಜೆಂಟಾಗಿ ಭೆಟ್ಟಿಯಾಗಬೇಕಾಗೇದs ಇವತ್ತ. ನಿಮ್ಮ ಕೂಡ ಇನ್ನೂ ಬಾಳ ಮಾತಾಡೋದದರಿ ಸರ್. ನಿಮ್ಮ ಭೆಟ್ಟೀ ಆಗದ ಎಂಟ್ಹತ್ತು ವರ್ಷ ಆತು. ಹಿಂದಿನ ಬಾಕೀ ಎಲ್ಲಾ ತೀರಿಸಬೇಕಾಗೇತಿ. ನೀವೆಲ್ಲಿ ಉಳಕೊಂಡೀರಿ?'

ನಾನು ಉಳಿದುಕೊಂಡಿದ್ದ ಲಾಜಿಂಗಿನ ಹೆಸರು ಹೇಳಿದೆ.

'ಮೀಟಿಂಗು ಯಾವಾಗ ಮುಗೀತದ?'

ಮೀಟಿಂಗು ಮುಗಿಯುವ ಅಜಮಾಸು ಸಮಯ ತಿಳಿಸಿದೆ.

'ಹಾಂಗಿದ್ದರ, ಮಧ್ಯಾಹ್ನ ಮೂರು ಗಂಟೇ ಹೊತ್ತಿಗೆ ನಿಮ್ಮ ರೂಮಿಗೆ ತಪ್ಪದs ಬರ್ತೀನಿ. ನೀವು ಎಲ್ಲೂ ಹೋಗಬ್ಯಾಡ್ರಿ' ದೇಶಪಾಂಡೆ ಕರಾರು ಹಾಕುವವನಂತೆ ಮಾತಾಡಿದ್ದರೂ, ಅದರಲ್ಲಿ ಅಗೌರವದ ದನಿ ಇರಲಿಲ್ಲ. ಒಂದು ಬಗೆಯ ಸಲಿಗೆಯ, ಆದರೂ ಗೌರವದ ಎಲ್ಲೆ ಮೀರದ ವಿಶ್ವಾಸದಿಂದ ಅವನು ಮಾತಾಡುತ್ತಿದ್ದ. ಅದೇ ದೇಶಪಾಂಡೇನ ಕರಾಮತ್ತು. ಇಂಥ ಚಾಲಾಕಿನಿಂದಲೇ ಆತ ಯಾರನ್ನಾದರೂ ಸುಲಭವಾಗಿ ಮರುಳುಗೊಳಿಸಬಲ್ಲ. ಅದಕ್ಕಾಗಿಯೇ ಅವನು ಎದುರಿಗಿದ್ದರೆ ನನಗೆ ಒಂದು ಬಗೆಯ ಮುಜುಗರ.

ಮೊದಲು ಇಲ್ಲಿಂದ ಪಾರಾದರೆ ಸಾಕೆಂದು ಆಗಲಿ ಎಂದು ದೇಶಪಾಂಡೆಗೆ ಮಾತು ಕೊಟ್ಟೆ.

ಆ ಮುದುಕರು ಇನ್ನೂ ಹಾಗೇ ಮಿಕಿಮಿಕಿ ನೋಡುತ್ತ ನಿಂತೇ ಇದ್ದರು. ಇಷ್ಟು ಹೊತ್ತಾದರೂ ಅವರು ಒಂದು ಮಾತನ್ನೂ ಆಡಲಿಲ್ಲವಲ್ಲ ಎಂದು ಆಶ್ಚರ್ಯವಾಯಿತು.

ಅಂತೂ ಅವರನ್ನು ಅಲ್ಲೇ ಬಿಟ್ಟು ಮೀಟಿಂಗಿಗೆ ಹೋದೆ. ಮಧ್ಯಾಹ್ನ ಮೀಟಿಂಗು ಮುಗಿದ ಮೇಲೆ ದೇಶಪಾಂಡೇನ ನೆನಪೇ ಆಗಲಿಲ್ಲ. ನನ್ನ ಮನಸ್ಸಿನ ಆಳದಲ್ಲಿ ನನಗೇ ತಿಳಿಯದಂತೆ, ಅವನಿಂದ ಮತ್ತು ಅವನ ಸಿನಿಮಾ ಚಾನ್ಸುಗಳ ಕಿರಿಕಿರಿಯಿಂದ ತಪ್ಪಿಸಿಕೊಳ್ಳುವ ಒತ್ತಾಸೆಯೂ ಗುಪ್ತವಾಗಿ ಕೆಲಸ ಮಾಡಿರಬೇಕೆಂದು ಕಾಣುತ್ತದೆ. ಅಲ್ಲಿಂದ ನೇರವಾಗಿ ನನ್ನ ಮಗಳಿಗೆ ವಿಧಾನಸೌಧ, ಕಬ್ಬನ್‌ಪಾರ್ಕು, ಬಾಲಭವನ, ವಿಶ್ವೇಶ್ವರಯ್ಯ ಮ್ಯೂಜಿಯಂ ಇತ್ಯಾದಿಗಳನ್ನು ತೋರಿಸಿಕೊಂಡು ಬರಲು ಹೋದೆ. ದೇಶಪಾಂಡೆಯ ಸಮಾಚಾರ ಅಲ್ಲಿಗೆ